ಪಿ.ಎನ್.ಶ್ರೀವತ್ಸ, ಬೆಂಗಳೂರು

*ಇಲ್ಲೊಬ್ಬರ ಮನೆಯಲ್ಲಿ ಸಾವು ಸಂಭವಿಸಿದ್ದರೂ ಎಲ್ಲರೂ ನಗು ನಗುತ್ತಲೇ ಇದ್ದರಲ್ಲಾ...?*



ಸತ್ತವರು ಎಲ್ಲರ ಹೆಸರಿಗೂ ಭರ್ಜರಿ ವಿಲ್ ಮಾಡಿದ್ದರಂತೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಸಿಂಹದ ಗರ್ಜನೆಗಿಂತ ಒಂದು ಹೆಣ್ಣಿನ ಪಿಸುಮಾತು ಬಹಳ ದೂರದವರೆಗೆ ಕೇಳಿಸುತ್ತದಂತೆ, ಏಕಿರಬಹುದು?*

ಪಿಸುಮಾತು ಎಚ್1 ಎನ್1 ಗಿಂತಲೂ ವೇಗವಾಗಿ ಹರಡುವುದರಿಂದ!

ಹಾಡ್ಯ ಜಯಾನಂದ, ಮೈಸೂರು

*11-11-11ರಂದು ಹುಟ್ಟಿದ ಮಗುವಿಗೆ ಏನು ಹೆಸರಿಡಬಹುದು?*

ಡಬ್ಬಲ್ ಗೋವಿಂದ!

ಸಾರಂಗ್, ಬೆಂಗಳೂರು

*ಸಿನಿಮಾ ನಟನಾಗಲೋ, ರೌಡಿಯಾಗಲೋ, ಸ್ವಾಮೀಜಿಯಾಗಲೋ ಹೇಳಿ ಗುರುವೆ?*

ಸ್ವಾಮೀಜಿಯೇ ಆಗಿಬಿಡಿ, ರಾಮ ಎನ್ನಲೂ, ಐಷಾರಾಮ ಎನ್ನಲೂ ಅದೇ ಸರಿಯಾದ ಪಟ್ಟ!

ಜಾಕೋಬ್ ಡಿಸೋಜ, ಕುರುವಳ್ಳಿ

*ಕೈ ಕೆಸರಾದರೆ ಬಾಯ್ಮೊಸರು, ಬಾಯಿ ಕೆಸರಾದರೆ?*



ಮಣ್ಣು ತಿನ್ನುವ ಕೆಲಸ ಮಾಡಿರುವುದು ಗ್ಯಾರಂಟಿ!

ಡಿ.ಎಲ್. ನಾಗರಾಜ್, ಚನ್ನಗಿರಿ

*ದುಂಬಿಗೂ, ಮಾನವನಿಗೂ ಏನು ವ್ಯತ್ಯಾಸ ರಾಮ್?*

ಕಂಡವರ ತೋಟಕ್ಕೆ ನುಗ್ಗಿ ಹೂವಿನ ಮಕರಂದ ಹೀರಿದರೂ ಯಾರೂ ದುಂಬಿಯ ಕಾಲು ಮುರಿಯುವುದಿಲ್ಲ!

ಪಿ.ಜೆ.ರಾಘವೇಂದ್ರ, ಮೈಸೂರು

*ಜ್ಯೋತಿ ಬೆಳಗುವವರೆಂದುಕೊಂಡಿದ್ದೆವು, ಬತ್ತಿ ಇಟ್ಟುಬಿಟ್ಟರಲ್ಲಾ...?*

ಎಣ್ಣೆ ಹಾಕುವವರನ್ನ ನಂಬಬೇಡಿ ಅಂದೆ, ನೀವು ಕೇಳಲಿಲ್ಲ!

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

*ಇಲ್ಲೊಬ್ಬಳು ಕಂಬೈನ್ಡ್ ಸ್ಟಡಿಗೆ ಕರೆದಿದ್ದಾಳೆ?*

ಸ್ಟಡಿ ಟೈಮಲ್ಲಿ ಬೇಕಾದ ಕುರುಕಲು ತಿಂಡಿಗಳನ್ನು ನೀವು ಚೆನ್ನಾಗಿ ಮಾಡುವಿರಂತಲ್ಲ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ನೀವು ಕೇಳಿದಿರಿ ವಿಭಾಗಕ್ಕೆ ಬರುವ ಪ್ರಶ್ನೆಗಳನ್ನು ಓದಿದಾಗ ನಿಮಗೆ ಏನೆನ್ನಿಸುತ್ತೆ ರಾಮ್?*

ಉತ್ತರಿಸಲು ತಿಣುಕುವಂತಹ ಪ್ರಶ್ನೆಗಳನ್ನು ಕೇಳಿದರೆ ಚೆನ್ನ ಎನಿಸುತ್ತದೆ!

ಕುಮಾರ ಚಲವಾದಿ, ಹೊಳೆನರಸಿಪುರ

*ಪರಸ್ತ್ರೀಯರ ಸೌಂದರ್ಯ ನೋಡುವುದು ತಪ್ಪು ಎಂದು ಇಲ್ಲೊಬ್ಬನ ಅಂಬೋಣ. ನೀವೇನಂತೀರಿ?*

ಎ ಥಿಂಗ್ ಆಫ್ ಬ್ಯೂಟಿ ಈಸ್ ಎ ಜಾಯ್ ಫಾರ್ ಎವರ್ ಎನ್ನುತ್ತಾನೆ ಕಿಪ್ಲಿಂಗ್. ನೋಡುವುದು ತಪ್ಪಲ್ಲ, ಬಯಸಬಾರದಷ್ಟೆ!

ಡಿ.ದೊಡ್ಡಲಿಂಗೇಗೌಡ, ಮಳವಳ್ಳಿ

*ನಾನು ನಿವೃತ್ತನಾಗಿ ಮನೆಗೆ ಬಂದಾಗ ನನ್ನ ಹೆಂಡತಿ ನನ್ನ ನಿವೃತ್ತಿ ಯಾವಾಗ? ಎಂದಳಲ್ಲಾ...?*

ಕುರಿಯಂತಹ ಸೊಸೆ ಬಂದಾಗ!

ವಿ.ಹಮೀದ್, ವಿಟ್ಲ

*ಮದುವೆಗೆ ಒಂದು ಮುಹೂರ್ತ ಇದ್ದಂತೆ ಲವ್ವಿಗೆ ಯಾಕಿಲ್ಲ?*

ಇದೆಯಲ್ಲಾ; ಇವನು ಅವಳಿಗೆ ಬೀಳುವ ಮುಹೂರ್ತ ಗುಳಿ-ಕ ಕಾಲ, ಅವಳು ಇವನಿಗೆ ಬೀಳುವುದು ಯಮಗಂಡ!

ಮುರಲೀಧರ ಕುಲಕರ್ಣಿ, ಬೀದರ್

*ಕೊಡುವಾಗ ಹೆಚ್ಚು, ತೆಗೆದುಕೊಳ್ಳುವಾಗ ಕಡಿಮೆ ಎನಿಸುವ ವಸ್ತು ಯಾವುದು?*

ದಾನ!

ನರಸಿಂಹ ಎಂ. ಪೈ, ಕಾಸರಕೋಡ

*ಪ್ರೀತಿ ಫಜೀತಿಯಾಗುವುದು ಯಾವಾಗಣ್ಣ...?*

ಹೆಂಡತಿಗೆ ತಿಳಿದಾಗ!

## ಬಹುಮಾನಿತ ಪ್ರಶ್ನೆ

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಕುಮಾರಿ ಜಯಲಲಿತಾ ತಮಿಳುನಾಡಿನ ಕಾವೇರಮ್ಮನಂತೆ?*

ನಿಜವೇ. ಅಲ್ಲಿನ ರಾಜಕೀಯ ಹವೆ ಕಾವೇರಲು ಆ ಅಮ್ಮನೇ ಕಾರಣ!

ವಿದ್ಯಾನಾಗ್, ಬೆಂಗಳೂರು

*ಪ್ರೇಮಿಗಳು ಪರಸ್ಪರ ಮನಸ್ಸನ್ನು ಕದ್ದರೂ, ಹೃದಯವನ್ನು ಕದ್ದೆ ಎಂದು ಹೇಳುವರಲ್ಲ, ಏಕೆ?*

ಪ್ರೇಮವೆಂದರೆ ಅದೇ ಮೊದಲ ಹೆಜ್ಜೆಯಲ್ಲೇ ಕಂಫ್ಯೂಷನ್!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ದೇವರನ್ನು ಪೂಜಿಸಿದರೆ ವರ ಕೊಡುತ್ತಾನೆ, ಹೆಂಡತಿಯನ್ನು ಪೂಜಿಸಿದರೆ...?*

ಸರ ಕೇಳುತ್ತಾಳೆ!

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಯಲಹಂಕ

*ಕನ್ನಡಿ ಹೆಣ್ಣು ಜಾತಿಗೆ ಸೇರಿದ್ದು ಎಂದು ಹೇಗೆ ಹೇಳುತ್ತೀರಿ ಗುರೂಜಿ?*

ನಿಮ್ಮ ಎಲ್ಲಾ ದೋಷಗಳನ್ನೂ ಯಾವಾಗಲೂ ಎತ್ತಿ ತೋರುತ್ತದಲ್ಲ!

ಎಂ. ಮಲ್ಲಯ್ಯ, ಶ್ರೀರಾಂಪುರ

*ರಾಮಬಾಣಕ್ಕೂ, ಲಕ್ಷ್ಮಣರೇಖೆಗೂ ವ್ಯತ್ಯಾಸವೇನು ರಾಮ್‌ಜೀ?*



ರಾಮಬಾಣ ಅಂದಿಗೆ ಮಾತ್ರ ಸೀಮಿತ. ಲಕ್ಷ್ಮಣರೇಖೆ ಇಂದಿಗೂ ಜಿರಳೆಗಳನ್ನು ಕೊಲ್ಲುತ್ತಿದೆ!

ರೆಮಿತ್ ಸಿಕ್ವೇರಾ, ಹೊಸನಗರ

*ದೇವದಾಸಿ ಎನ್ನುವುದು ರೂಢಿಯಲ್ಲಿದೆ, ದೇವದಾಸ ಏಕಿಲ್ಲ?*

ದೇವೀದಾಸರಿದ್ದಾರಲ್ಲಾ... ದೇವನಿಗೆ ದಾಸಿ, ದೇವಿಗೆ ದಾಸ ಎನ್ನುವುದು ಮ್ಯಾಗ್ನೆಟಿಕ್ ನಿಯಮ!

■ ರಾಮ್